

ಆ ಬೆಟ್ಟದ ಬುಡದಲ್ಲಿ ಒಂದು ಕೊಳವಿತ್ತು. ಒಂದು ದಿನ ವಿನಯ, 'ನೋಡಿ ಸರ್ ಚಿರತೆಗಳು ಹಗಲು, ರಾತ್ರಿ ನೀರು ಕುಡಿಯಲು ಇಲ್ಲಿಗೆ ಬರುತ್ತವೆ. ಹೆಜ್ಜೆ ಗುರುತು ನೋಡಿ ಏನ್ ಮಜಾ ಇದೆ' ಎಂದು ತೋರಿಸಿ ದಿಗಿಲು ಹುಟ್ಟಿಸಿದ್ದ. ಇದೇ ಜಾಗಕ್ಕೆ ಈಗ ಹೋಗುವ ಪ್ಲಾನು ತಯಾರಾಗುತ್ತಿತ್ತು.

ಏನೇ ಹೇಳಿ ಹಗಲಿನಲ್ಲಿ ಫೋಟೊ ತೆಗೆಯುವುದು ಸಲೀಸು. ಆಗ ಕಾಡಿನ ದಾರಿ, ನಾವಿರುವ ಸ್ಥಳ, ನಾವು ಚಿತ್ರಕ್ಕೆ ಆರಿಸಿಕೊಂಡ ವಸ್ತು ಎಲ್ಲವೂ ಸ್ಪಷ್ಟವಾಗಿ ಕಾಣುತ್ತವೆ. ಆದರೆ ಇದೇ ಕೆಲಸ ರಾತ್ರಿ ಹೊತ್ತು ಪೂರೈಸುವುದು ಚಾಲೆಂಜಿಂಗ್. ಅನಿರೀಕ್ಷಿತ ಅಪಾಯಗಳು ಯಾವ ಕ್ಷಣದಲ್ಲಿ ಬೇಕಾದರೂ ಬರಬಹುದು. ಎದುರಿಸಲು ನಾವು ಸಿದ್ಧರಿರಬೇಕು ಅಷ್ಟೆ. ಹಾವು, ಚೇಳು ಕಾಲಿಗೆ ಕುಕ್ಕದಂತೆ ಗಮ್ ಶೂ ಹಾಕಿರಲೇಬೇಕು. ಕತ್ತಲೆಯಲ್ಲಿ ಎಲ್ಲೆಲ್ಲಿ ಕಾಲಿಡುತ್ತೇವೆಯೋ ಯಾರಿಗೆ ಗೊತ್ತು! ದೊಡ್ಡ ಹೆಡ್ ಟಾರ್ಚ್, ಒಳ್ಳೆಯ ಫ್ಲಾಶ್ ಲೈಟ್, ಮಳೆ ಬಂದರೆ ಛತ್ರಿ, ರೈನ್ ಕೋಟ್, ಒಂದು ಸಣ್ಣ ಕತ್ತಿ ಇತ್ಯಾದಿಗಳು ಜೊತೆಗಿರಬೇಕು.

ಇದಾದ ಮೇಲೆ ಕಾಡಿನ ದಾರಿ ತಿಳಿದ ಸ್ಥಳೀಕರೊಬ್ಬರು ಬರಬೇಕು. ಇಲ್ಲದಿದ್ದಲ್ಲಿ ಕಾಡಲ್ಲಿ ಎಲ್ಲಿ ಹೋಗಿ ಎಲ್ಲಿಂದ ಬರುವುದೋ ಗೊತ್ತಾಗುವುದು ಹೇಗೆ? ಕೊರಕಲು, ಇಳಿಜಾರು, ಕೆಸರು, ಹೊಂಡ ಎಲ್ಲಾ ಗೊತ್ತಿರುವ ಸಾಥಿ ಇರುವುದು ಒಳಿತು. ಅದಲ್ಲದೆ ಹಾವುಗಳ ಓಡಾಟದ ಮಾಹಿತಿಯೂ ಅವರಿಗೆ ತಿಳಿದಿರಬೇಕು. ಅದರಲ್ಲೂ ಮಲೆನಾಡಿನಲ್ಲಿ ಕಾಮನ್ ಕ್ರೇಟ್ ಎನ್ನುವ ಅತ್ಯಂತ ವಿಷಕಾರಿ ಹಾವು ಓಡಾಡುವುದು ರಾತ್ರಿ ಹೊತ್ತಿನಲ್ಲಿ. ಅದು ಕಡಿದರಂತೂ ಮುಗಿದೇ ಹೋಯಿತು. ಬದುಕುವ ಸಾಧ್ಯತೆ ಕಡಿಮೆ. ರಾತ್ರಿ ಹೊತ್ತು ಫಳಫಳನೆ ಮಿಂಚುತ್ತಾ ವೇಗವಾಗಿ ಚಲಿಸುವ ಅದನ್ನು ವಿನಯ ನನಗೆ ಅನೇಕ ಸಲ ತೋರಿಸಿದ್ದ. ಭಾರತದ ಅತ್ಯಂತ ವಿಷಕಾರಿಯಾದ ನಾಲ್ಕು ಹಾವುಗಳ ಪೈಕಿ ಇದೂ ಕೂಡ ಒಂದು. ನಾನಂತೂ ಯಾವತ್ತೂ ಅದರ ಪಟ ತೆಗೆಯುವ ದುಸ್ಸಾಹಸಕ್ಕೆ ಹೋಗಲೇ ಇಲ್ಲ. ಆ ಹಾವು ಕೂಡ ಕೈಗೆ ಸಿಗದೆ ಎಕ್ಸ್ ಪ್ರೆಸ್ ರೈಲಿನಂತೆ ಓಡಿ ಹೋಗುವುದು ಮತ್ತೊಂದು ಕಾರಣ. ಹಂಪ್ಡ್ ನೋಸ್ ಎಂಬ ಮತ್ತೊಂದು ವಿಷಕಾರಿ ಹಾವು ಕೂಡ ಕೂತಲ್ಲಿಂದಲೇ ನೆಗೆದು ಕಚ್ಚುತ್ತದೆ. ಇದರ ಪಟವನ್ನು